**<u>ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ. ನ್ಯಾಯಾಲಯ ಕುಣಿಗಲ್</u>**

# ಸಿ.ಸಿ.1075/2018

| | |
|---|---|
| ಸಾಕ್ಷಿದಾರರ ಹೆಸರು | : ಸದಾಶಿವಯ್ಯ |
| ತಂದೆಯ ಹೆಸರು | : ಲೇಟ್ ರುದ್ರಪ್ಪ |
| ವಯಸ್ಸು | : 66 ವರ್ಷ |
| ಉದ್ಯೋಗ | : ನಿವೃತ್ತ ಎ.ಎಸ್.ಐ |
| ವಾಸ | : ಸಂಕೇನಹಳ್ಳಿ, ಕೊರಟಗೆರೆ ತಾಲ್ಲೂಕು |

**<u>ಸಾಕ್ಷಿಯನ್ನು ದಿನಾಂಕ: 07.02.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:</u>**

ನಾನು ಅಕ್ಟೋಬರ್ 2013 ರಿಂದ ಆಗಸ್ಟ್ 2018ರವರೆಗೆ ಕುಣಿಗಲ್ ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 30.06.2018 ರಂದು ನಾನು ಠಾಣಾ ಕರ್ತವ್ಯದಲ್ಲಿದ್ದಾಗ ಸಂಜೆ 7.00 ಗಂಟೆ ಸಮಯದಲ್ಲಿ ಚಾಸಾ.1 ರವರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಸ್ವೀಕರಿಸಿ ಠಾಣಾ ಮೊಕದ್ದಮೆ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸದರಿ ದೂರನ್ನು ನೋಡುತ್ತಿದ್ದು, ಅದನ್ನು ಈಗಾಗಲೇ **ನಿಪಿ.1** ಎಂದು ಗುರುತಿಸಲಾಗಿದೆ. ಅದರಲ್ಲಿನ ಸಾಕ್ಷಿಯ ಸಹಿಯನ್ನು **ನಿಪಿ.1(ಬಿ)** ಎಂದು ಗುರುತಿಸಲಾಯಿತು. ಸದರಿ ಪ್ರಥಮ ವರ್ತಮಾನ ವರದಿಯನ್ನು ನೋಡುತ್ತಿದ್ದು, ಅದನ್ನು **ನಿಪಿ.5** ಎಂದು ಗುರುತಿಸಲಾಗಿದೆ. ಅದರಲ್ಲಿನ ಸಾಕ್ಷಿಯ ಸಹಿಯನ್ನು **ನಿಪಿ.5(ಎ)** ಎಂದು ಗುರುತಿಸಲಾಯಿತು.

ನಂತರ ದಿನಾಂಕ 01.07.2018 ರಂದು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ಚಾಸಾ.2 ಮತ್ತು 4 ರವರ ಸಮಕ್ಷಮ ಚಾಸಾ.1 ರವರು ಸ್ಥಳ ತೋರಿಸಿದ ಮೇರೆಗೆ ಸ್ಥಳ ಪಂಚನಾಮೆಯನ್ನು ಬೆಳಿಗ್ಗೆ 8.15 ರಿಂದ 9.00 ಗಂಟೆಯವರೆಗೆ ಜರುಗಿಸಲಾಗಿದೆ. ಸಾಕ್ಷಿಯು ಸ್ಥಳ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ **ನಿಪಿ.2** ಎಂದು, ಅದರಲ್ಲಿರುವ ಸಹಿಯನ್ನು **ನಿಪಿ.2(ಡಿ)** ಎಂದು ಗುರುತಿಸಲಾಗಿದೆ. ಹಾಗೇ ಪಂಚನಾಮೆ ಸಮಯದಲ್ಲಿ ಅಪಘಾತಕ್ಕೀಡಾದ ವಾಹನ ಕೆಎ-06-ಇಎಲ್-1327 ಅನ್ನು ಅಮಾನತ್ತು ಪಡಿಸಿಕೊಳ್ಳಲಾಯಿತು. ಅದೇ ರೀತಿ ಅಪಘಾತಪಡಿಸಿದ ಕೆಎ-06-ಎಫ್-922 ರ ಕೆ ಎಸ್ ಆರ್ ಟಿ ಸಿ ಬಸ್ಸು ಮತ್ತು ಅದರ ಚಾಲಕನನ್ನು ಹಾಜರುಪಡಿಸಲು ಚಾಸಾ.8 ರವರಿಗೆ ಆದೇಶಿಸಿದ್ದೆ. ಠಾಣೆಯ ಬಳಿ ಚಾಸಾ.8 ರವರು ತಂದು ಹಾಜರುಪಡಿಸಿದ ಬಸ್ಸನ್ನು ಪಂಚರಾದ ಚಾಸಾ.5 ಮತ್ತು 6 ರವರ ಸಮಕ್ಷಮ ಅಮಾನತುಪಡಿಸಿಕೊಂಡಿದ್ದೆ. ಸದರಿ ಅಮಾನತು ಪಂಚನಾಮೆಯಲ್ಲಿ ನನ್ನ ಸಹಿ ಇರುತ್ತದೆ. ಸದರಿ ಅಮಾನತು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ.6** ಎಂದು, ಅದರಲ್ಲಿರುವ ಸಹಿಯನ್ನು **ನಿಪಿ.6(ಎ)** ಎಂದು ಗುರುತಿಸಲಾಗಿದೆ. ಸದರಿ ಕೆ ಎಸ್ ಆರ್ ಟಿ ಸಿ ಬಸ್ ನ ಚಾಲಕನಾದ ಆರೋಪಿಯ ವಿರುದ್ದ ದಸ್ತಗಿರಿ ಕ್ರಮ ಅನುಸರಿಸಿ ಠಾಣಾ ಜಾಮೀನಿನ ಮೇಲೆ ಬಿಡುಗಡೆಗೊಳಿಸಿರುತ್ತೇನೆ.

ನಂತರ ಚಾಸಾ.8 ರವರಿಗೆ ಕೆ ಎಸ್ ಆರ್ ಟಿ ಸಿ ಬಸ್ಸನ್ನು ನಷ್ಟ ಭರ್ತಿ ಪ್ರಮಾಣ ಪತ್ರ ಪಡೆದು ಬಸ್ಸನ್ನು ಬಿಡುಗಡೆಗೊಳಿಸಿರುತ್ತೇನೆ. ಸದರಿ ನಷ್ಟ ಭರ್ತಿ ಪ್ರಮಾಣ ಪತ್ರದಲ್ಲಿ ನನ್ನ ಸಹಿ ಇರುತ್ತದೆ. ಸದರಿ ನಷ್ಟ ಭರ್ತಿ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ **ನಿಪಿ.4** ಎಂದು, ಅದರಲ್ಲಿರುವ ಸಹಿಯನ್ನು **ನಿಪಿ.4(ಬಿ)** ಎಂದು ಗುರುತಿಸಲಾಗಿದೆ.

ದಿನಾಂಕ 03.07.2018 ರಂದು ವಶಪಡಿಸಿಕೊಂಡ ವಾಹನಗಳ ಕುರಿತು ಚಾಸಾ.9 ರವರಿಂದ ವರದಿ ಪಡೆದಿರುತ್ತೇನೆ. ಸದರಿ ಐ ಎಂ ವಿ ಪ್ರಮಾಣ ಪತ್ರದಲ್ಲಿ ನನ್ನ ಸಹಿ ಇರುತ್ತದೆ. ಸದರಿ ಐ ಎಂ ವಿ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ.8** ಎಂದು, ಅದರಲ್ಲಿರುವ ಸಹಿಯನ್ನು **ನಿಪಿ.8(ಎ)** ಎಂದು ಗುರುತಿಸಲಾಗಿದೆ.

ನಂತರ ಚಾಸಾ.7 ರವರಿಗೆ ದ್ವಿ ಚಕ್ರ ವಾಹನದ ನಷ್ಟ ಭರ್ತಿ ಪ್ರಮಾಣ ಪತ್ರ ಪಡೆದು ಬಿಡುಗಡೆಗೊಳಿಸಿರುತ್ತೇನೆ. ಸದರಿ ನಷ್ಟ ಭರ್ತಿ ಪ್ರಮಾಣ ಪತ್ರದಲ್ಲಿ ನನ್ನ ಸಹಿ ಇರುತ್ತದೆ. ಸದರಿ ನಷ್ಟ ಭರ್ತಿ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ.7** ಎಂದು, ಅದರಲ್ಲಿರುವ ಸಹಿಯನ್ನು **ನಿಪಿ.7(ಎ)** ಎಂದು ಗುರುತಿಸಲಾಗಿದೆ.

ದಿನಾಂಕ 03.08.2018 ರಂದು ಚಾಸಾ.3 ರವರ ಗಾಯದ ಪ್ರಮಾಣ ಪತ್ರವನ್ನು ಚಾಸಾ.10 ರವರಿಂದ ಪಡೆದಿರುತ್ತೇನೆ. ಸದರಿ ಗಾಯದ ಪ್ರಮಾಣ ಪತ್ರದಲ್ಲಿ ನನ್ನ ಸಹಿ ಇರುತ್ತದೆ. ಸದರಿ ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ **ನಿಪಿ.3** ಎಂದು, ಅದರಲ್ಲಿರುವ ಸಹಿಯನ್ನು **ನಿಪಿ.3(ಬಿ)** ಎಂದು ಗುರುತಿಸಲಾಗಿದೆ. ನಂತರ ಆರೋಪ ಸಾಬೀತಾದ ಕಾರಣ, ಆರೋಪಿಯ ವಿರುದ್ದ ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ:ಶ್ರೀ. ವೈ ಆರ್ ಹೆಚ್ ವಕೀಲರಿಂದ.**

ಸಾಮಾನ್ಯವಾಗಿ ಗಾಯಾಳು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆಯೇ ಎಂದು ಪರಿಶೀಲಿಸುತ್ತೇವೆ ಎಂದರೆ ಸರಿ. ಸಾಕ್ಷಿ ಮುಂದುವರೆದು, ಈ ಪ್ರಕರಣದಲ್ಲಿ ಆಸ್ಪತ್ರೆಯಿಂದ ಮಾಹಿತಿ ಬಂದಿರಲಿಲ್ಲ. ನಾನು ಎಂಎಲ್ಸಿ ವರದಿಯನ್ನು ನೋಡಿರಲಿಲ್ಲ. ನಿಪಿ.3ರಲ್ಲಿ ಯಾವ ವಾಹನಗಳ ನಡುವೆ ಅಪಘಾತವಾಗಿತ್ತು ಎಂದು ನಮೂದಾಗಿಲ್ಲ ಎಂದರೆ ಸರಿ. ನಾನು ತುಮಕೂರಿನ ಆಸ್ಪತ್ರೆಗೆ

ಹೋಗಿ ಗಾಯಾಳುವಿನ ದಾಖಲೆಗಳನ್ನು ಪಡೆದಿರುವುದಿಲ್ಲ.

2. ಸಾಮಾನ್ಯವಾಗಿ ನಮ್ಮ ವ್ಯಾಪ್ತಿಯಲ್ಲಿ ಅಪಘಾತವಾದರೇ ತಕ್ಷಣ ಮಾಹಿತಿ ದೊರೆಯುತ್ತದೆ ಎಂದರೆ ಸರಿಯಲ್ಲ. ಅಪಘಾತದ ಬಗ್ಗೆ ನಮಗೆ ಬೇರೆ ಮೂಲದಿಂದ ಮಾಹಿತಿ ಬಂದಿರಲಿಲ್ಲ. ನಿಪಿ.2ನ್ನು ಜರುಗಿಸುವ ವೇಳೆಗೆ ದ್ವಿ ಚಕ್ರ ವಾಹನ ಅಲ್ಲಿ ಇರದೇ ಫಿರ್ಯಾದುದಾರರು ತಂದು ಹಾಜರುಪಡಿಸಿದ್ದರು. ನಿಪಿ.2ರ ಪಂಚರಿಗೆ ನೋಟಿಸ್ ನೀಡಿರಲಿಲ್ಲ. ನಿಪಿ.2ರಲ್ಲಿ ಪಾದಚಾರಿ ರಸ್ತೆ ಮತ್ತು ರಸ್ತೆಯ ಅಳತೆ ನಮೂದು ಮಾಡಿಲ್ಲ ಎಂದರೆ ಸರಿ. ನಿಪಿ.2ರ ಕಚ್ಚಾ ನಕ್ಷೆ ತಯಾರು ಮಾಡಿಲ್ಲ. ನಿಪಿ.2ರಲ್ಲಿ ಠಾರ್ ಮತ್ತು ಮಣ್ಣಿನ ರಸ್ತೆಗೂ ಎಷ್ಟು ಅಡಿ ಎತ್ತರವಿದೆ ಎಂದು ನಮೂದು ಮಾಡಿಲ್ಲ ಎಂದರೆ ಸಾಕ್ಷಿಯು ಎರಡೂ ಸಮನಾಗಿದೆ ಎಂದು ನುಡಿಯುತ್ತಾರೆ.

3. ನಿಪಿ.6ನ್ನು ಜರುಗಿಸಲು ಚಾಸಾ.8 ರವರಿಗೆ ನೋಟಿಸ್ ನೀಡಿದ್ದೆ. ಚಾಸಾ.8 ರವರಿಗೆ ಬಸ್ಸನ್ನು ಹಾಜರುಪಡಿಸಲು ಅಧಿಕಾರ ಇರಲಿಲ್ಲ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ನಿಪಿ.6ರ ಬಸ್ಸು ಯಾವ ಬಣ್ಣದ್ದು ಎಂದು ಅದರಲ್ಲಿ ಬರೆದಿಲ್ಲ. ನಿಪಿ.1ರಲ್ಲಿ ಮೂರು ಜನ ವಾಹನದಲ್ಲಿ ಇದ್ದರು ಎಂದು ಬರೆದಿದ್ದು, ಆ ಕುರಿತು ಕುಣಿಗಲ್ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಯಾರು ಚಿಕಿತ್ಸೆ ಪಡೆದಿರುತ್ತಾರೆ ಎಂದು ಪರಿಶೀಲನೆ ಮಾಡಿರುವುದಿಲ್ಲ. ಚಾಸಾ.1 ರವರಿಗೆ ವಾಹನ ಚಾಲನಾ ಪರವಾನಗಿ ಇರಲಿಲ್ಲ. ಚಾಸಾ.1 ರವರು ಚಲಾಯಿಸುತ್ತಿದ್ದ ವಾಹನನಕ್ಕೆ ವಾಹನ ವಿಮೆ ಇರಲಿಲ್ಲ. ನಿಪಿ.6ರಲ್ಲಿ ಬಸ್ಸಿಗೆ ಯಾವುದೇ ಜಖಂ ಆಗಿಲ್ಲ. ನಿಪಿ.6ರ ಬಸ್ಸಿನ ಯಾವ ಭಾಗಕ್ಕೆ ದ್ವಿ ಚಕ್ರ ವಾಹನ ತಾಗಿದೆ ಎಂದು ನಮೂದು ಮಾಡಿಲ್ಲ. ನಿಪಿ.2ರಲ್ಲಿ ದ್ವಿ ಚಕ್ರ ವಾಹನಕ್ಕೆ ಏನು ಜಖಂ ಆಗಿದೆ

ಎಂದು ಬರೆದಿಲ್ಲ ಎಂದರೆ ಸರಿಯಲ್ಲ. ನಿಪಿ.2ರಲ್ಲಿ ದ್ವಿ ಚಕ್ರ ವಾಹನದ ಎಡಭಾಗದ ಬ್ರೇಕ್ ಪ್ಯಾಡ್ ತುಂಡಾಗಿತ್ತು. ಚಾಸಾ.1 ರವರು ಸ್ವಯಂ ರಸ್ತೆಯಿಂದ ಮಣ್ಣಿನ ರಸ್ತೆಗೆ ಗಾಡಿ ಇಳಿಸಿಕೊಂಡು ಅಪಘಾತಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಯಾವುದೇ ಮಾಹಿತಿ ಇರದೇ ಇದ್ದರೂ, ನನ್ನ ಕೈ ಕೆಳಗಿನ ಸಿಬ್ಬಂದಿಯವರು ತಯಾರಿಸಿದ ವರದಿಯ ಮೇಲೆ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಗಾಯಾಳು ಖಾಸಗಿ ಅಥವಾ ತುಮಕೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದರೇ, ಆ ಕುರಿತು ದಾಖಲೆಗಳನ್ನು ಪಡೆಯುತ್ತಿದ್ದೆ, ಆ ರೀತಿ ಪಡೆಯದ ಕಾರಣ, ಅವರು ಯಾವುದೇ ಚಿಕಿತ್ಸೆ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃಇಲ್ಲ**

*( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)*

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ
ಕುಣಿಗಲ್.